## 15. ಸರ್ಕಾರಿ ಕಿರಿಯ ಪ್ರಾಥಮಿಕಶಾಲೆ, ಹೊಂಡಲಗದ್ದೆ

ಹೊಸನಗರ ತಾಲ್ಲೂಕಿನ ಹುಂಚ ಕ್ಲಸ್ಟರ್ ವ್ಯಾಪ್ತಿಯ ಸ.ಕಿ.ಪ್ರಾ.ಶಾಲೆ ಹೊಂಡಲಗದ್ದೆ ಶಾಲೆ ನಲಿಕಲಿ ತರಗತಿಯ ಯಶಸ್ವಿ ನಿರ್ವಹಣೆಗೆ ಉತ್ತಮ ಉದಾಹರಣೆಯಾಗಿದೆ.ನಲಿಕಲಿ ತರಗತಿಯು ಒಂದು ಘಟಕ ಮತ್ತು 15 ಮಕ್ಕಳನ್ನು ಹೊಂದಿದ್ದು. ಉತ್ತಮ ಕಲಿಕಾ ವಾತಾವರಣವನ್ನು ಹೊಂದಿದೆ. ಮುಖ್ಯ ಶಿಕ್ಷಕರಾದ ಶ್ರೀಮತಿ ಗೀತ ಮತ್ತು ಸಹಶಿಕ್ಷಕರಾದ ಶ್ರೀಮತಿ ತನ್ವೀರ್ ತಬಸ್ಸುಮ್ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ನಲಿ–ಕಲಿ ತರಗತಿಯಲ್ಲಿ ಎಲ್ಲಾ ಅಂಶಗಳನ್ನು ಅಳವಡಿಸಲಾಗಿದ್ದು ಎಲ್ಲಾ ಮಕ್ಕಳಿಗೂ ವಾಲ್ ಸ್ಲೇಟ್, ವ್ಯವಸ್ಥೆ ಕಲ್ಪಿಸಿ ಮಕ್ಕಳ ಬರವಣಿಗೆಗೆ ಅನುಕೂಲ ಮಾಡಲಾಗಿದೆ. ಮಕ್ಕಳು ರಚಿಸಿದ ಕ್ರಾಫ್ಟ್‌ಗಳನ್ನು ಕಲಿಕಾ ಚಪ್ಪರದಲ್ಲಿ ವ್ಯವಸ್ಥಿತವಾಗಿ ಪ್ರದರ್ಶಿಸಲಾಗಿದೆ. ಮಕ್ಕಳೇ ತಮ್ಮ ಪ್ರಗತಿಯನ್ನು ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಪ್ರಗತಿ ನೋಟದಲ್ಲಿ ಗುರುತಿಸಿ ಕಲಿಕೆಯನ್ನು ದಾಖಲಿಸುತ್ತಾರೆ. ವಿಶೇಷವಾಗಿ ಹವಾಮಾನ ನಕ್ಷೆಯನ್ನು ಗೋಡೆಯಲ್ಲಿರುವ ಫಲಕವನ್ನು ನೋಡಿ ಗುರುತಿಸಬಹುದಾಗಿದೆ. ಹವಾಮಾನ ನಕ್ಷೆಯಲ್ಲಿ 2 ನೇ ತರಗತಿ ಮಕ್ಕಳು ಪ್ರತಿದಿನದ ಹವಾಮಾನ ಗುರುತಿಸುವರು. ತಿಂಗಳಲ್ಲಿ ಕ್ರೋಢೀಕರಿಸಿ 3 ನೇ ತರಗತಿ ಮಕ್ಕಳು ಪುಸ್ತಕದಲ್ಲಿ ದಾಖಲಿಸುವರು.

ಕಾರ್ಡುಗಳನ್ನು ಇಡಲು ಅಚ್ಚುಕಟ್ಟಾದ ಬ್ಯಾಗ್‌ನ ವ್ಯವಸ್ಥೆ ಮಾಡಲಾಗುತ್ತಿದೆ. ಕಲಿಕೋಪಕರಣಗಳನ್ನು ರ್‍ಯಾಕ್‌ನಲ್ಲಿ ಇಡುವ ವ್ಯವಸ್ಥೆಮಾಡಲಾಗಿದ್ದು, ಮಕ್ಕಳು ತಾವೇ ಅವುಗಳನ್ನು ತೆಗೆದು ಬಳಸಿ ನಂತರ ಅವುಗಳನ್ನು ಅದೇ ಸ್ಥಳದಲ್ಲಿ ಇಡುವಂತೆ ವ್ಯವಸ್ಥೆ ಮಾಡಲಾಗಿದೆ. ನಲಿ–ಕಲಿಯಲ್ಲಿ ಕನ್ನಡ, ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳನ್ನು ಚಟುವಟಿಕೆಗಳ ಮೂಲಕ ಕಲಿಸಲಾಗುತ್ತಿದೆ. ಮಕ್ಕಳು ಕನ್ನಡ ಕಾಪಿ ಬರೆಯುವಂತೆ ಇಂಗ್ಲಿಷ್ ಕಾಪಿಯನ್ನು ಬರೆಯಲು ಪ್ರೋತ್ಸಾಹ ನೀಡಲಾಗುತ್ತಿದೆ. ಇದರಿಂದ ಮಕ್ಕಳು ಬರವಣಿಗೆ ಉತ್ತಮ ಪಡಿಸಿಕೊಳ್ಳುತಿದ್ದಾರೆ.

### ನಲಿಕಲಿ ತರಗತಿಯ ಉತ್ತಮ ಅಂಶಗಳು:

1. ಕಾರ್ಡು,ವಾಚಕ,ಪ್ರಗತಿ ನೋಟಗಳನ್ನು ಕ್ರಮಬದ್ಧವಾಗಿ ಜೋಡಿಸಿರುವುದು.ಮತ್ತು ಮಕ್ಕಳಿಗೆ ಎಟುಕುವಂತೆ ಇಟ್ಟಿರುವುದು.ಮಕ್ಕಳೇ ನಿರ್ವಹಿಸುತ್ತಿರುವುದು.
2. ಮಕ್ಕಳಿಂದಲೇ ಕಸದಿಂದ ರಸ ತತ್ವದಡಿ ಕಲಿಕಾಂಶ ಆಧರಿಸಿ ಕಲಿಕೋಪಕರಣಗಳನ್ನು ತಯಾರಿಸಿರುವುದು.
3. ಪ್ರತಿ ವಿಷಯ ,ಕಲಿಕಾಂಶ ,ಮೈಲುಗಲ್ಲು ಆಧರಿಸಿ ವ್ಯವಸ್ಥಿತವಾಗಿ ಕಲಿಕೋಪಕರಣ ಜೋಡಿಸಿಟ್ಟಿರುವುದು.
4. ಸರಳ ಪ್ರಯೋಗಗಳ ದಾಖಲೀಕರಣ ಮತ್ತು ತರಗತಿ ಹೊರಗಡೆಯೂ ಪ್ರಯೋಗಗಳನ್ನೇ ಮಕ್ಕಳು ನಿರ್ವಹಿಸುತ್ತಿದ್ದಾರೆ.
5. ಸಾಮೂಹಿಕ ಚಟುವಟಿಕೆಗೆ ಕಥೆ ,ಹಾಡು,ಒಗಟು ಹೀಗೆ ಚಟುವಟಿಕೆಗಳನ್ನು ಸಂಗ್ರಹಿಸಿಡಲಾಗಿದೆ.
6. ಕೃತಿ ಸಂಪುಟಗಳಿಗೆ ಬಾಕ್ಸ್ ಫೈಲ್ ವ್ಯವಸ್ಥೆ ಮಡಲಾಗಿದೆ.
7. ಸಾಧನ ಕಾರ್ಡುಗಳ ಬುಕ್ ಲೆಟ್ ಮಾಡಿ ಓದುವಿಕೆ ಅಭ್ಯಾಸ ಮಾಡಿಸಲಾಗುತ್ತಿದೆ.
8. ವಾಚಕಗಳನ್ನು ಮಕ್ಕಳು ಪಠಿಸುವಾಗ ಉಚ್ಚಾರಣೆಯನ್ನು ತಿದ್ದಲಾಗುತ್ತಿದೆ.
9. ಆಡಿಯೋ ಕ್ಯಾಸೆಟ್ಗಳ ಮೂಲಕ ಮಕ್ಕಳ ಆಲಿಸುವಿಕೆಯ ಸಾಮರ್ಥ್ಯ ಪರೀಕ್ಷಿಸಲಾಗುತ್ತಿದೆ.
10. ಮುದ್ರಿತ ಬರಹ,ಕೈ ಬರಹದ ವಾಚನದ ಚಟುವಟಿಕೆಗಳ ಮೂಲಕ ಓದುವ ಕೌಶಲ ಪರೀಕ್ಷಿಸಲಾಗುತ್ತಿದೆ.
11. ಇಂಗ್ಲೀಶ್ ಕಲಿಕೆಗೆ ಅನುಕೂಲವಾಗುವಂತೆ ಕಲಿಕಾ ಮೂಲೆ,ವಾಚನಾ ಮೂಲೆ ಸಿದ್ಧಪಡಿಸಲಾಗಿದೆ.
12. ನೋ ಬ್ಯಾಗು ಡೇ ದಿನ ಹೊಸ ಕ್ರಾಫ್ಟ್ ,ರಸಪ್ರಶ್ನೆ ಮುಂತಾದ ಚಟುವಟಿಕೆಗಳಲ್ಲಿ ಮಕ್ಕಳನ್ನು ಸಂಪೂರ್ಣವಾಗಿ ತೊಡಗಿಸಲಾಗುತ್ತಿದೆ.

### ನಲಿಕಲಿ ತರಗತಿ ಯಶಸ್ಸಿಗೆ ಕಾರಣವಾಗಿರುವ ಅಂಶಗಳು:

1. ಶಿಕ್ಷಕರು ಪ್ರತಿದಿನ ಅಗತ್ಯಸಿದ್ಧತೆ ನಡೆಸಿಯೇ ತರಗತಿಗೆ ಆಗಮಿಸುತ್ತಾರೆ.
2. ಪ್ರತಿ ಪೋಷಕರು ಕನಿಷ್ಠ ವಾರಕ್ಕೊಮ್ಮೆಯಾದರೂ ಶಾಲೆಗೆ ಭೇಟಿ ನೀಡುತ್ತಾರೆ.
3. ಪ್ರತಿ ಎಸ್ ಡಿ ಎಂ ಸಿ ಸಭೆಗೂ ಎಲ್ಲಾ ಸದಸ್ಯರೂ ಹಾಜರಾಗುತ್ತಾರೆ.

4. ಹಾಜರಾತಿ ಪ್ರತಿದಿನವೂ ಶೇ.100 ಇರುತ್ತದೆ. ಮಕ್ಕಳು ಗೈರಾಗುವುದೂ ತೀರಾ ಅಪರೂಪ.ಅದೂ ಸಕಾರಣ ಮತ್ತು ಪೂರ್ವಾನುಮತಿಯೊಂದಿಗೆ ಮಾತ್ರ.
5. ಶಿಕ್ಷಕರು ಆಗಾಗ್ಗೆ ಮನೆಭೇಟಿ ಮಾಡುತ್ತಾರೆ.ಮಕ್ಕಳ ಸಾಮಾಜಿಕ ಆರ್ಥಿಕ ಹಿನ್ನೆಲೆ ಅರಿತು ಮಕ್ಕಳೊಂದಿಗೆ ಸಮಾಲೋಚನೆ ನಡೆಸುತ್ತಾರೆ.
6. ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಅನುಷ್ಠಾನ ಮಾಡುತ್ತಿರುವುದರಿಂದ ಹಾಗೂ ಮಕ್ಕಳಿಗೂ ಪ್ರೋತ್ಸಾಹ ದೊರೆಯುತ್ತಿರುವುದರಿಂದ ಸಹಜವಾಗಿ ಅವರ ಆತ್ಮವಿಶ್ವಾಸ ವೃದ್ಧಿಸಿದೆ.
7. ಓದು–ಬರಹ–ಲೆಕ್ಕ–ಪರಿಸರ ಜ್ಞಾನ–ಮೌಲ್ಯಗಳು–ಸ್ವಚ್ಛತೆ ಈ ಅಂಶಗಳನ್ನು ತಮ್ಮತರಗತಿ ನಿರ್ವಹಣೆಯಲ್ಲಿ ಅಳವಡಿಸಿಕೊಂಡಿದ್ದಾರೆ.

ಈ ರೀತಿಯಲ್ಲಿ ಸಮುದಾಯದ ಸಹಭಾಗಿತ್ವ –ಪೋಷಕರ, ಎಸ್‌ಡಿಎಂಸಿಯವರ ಸಹಕಾರ ಪಡೆದು ಶಿಕ್ಷಕರು ನಲಿಕಲಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದು ಸ್ವಾಗತಾರ್ಹ. ಆ ಮೂಲಕ ಮತ್ತಷ್ಟು ಶಾಲೆಗಳಿಗೆ ಪ್ರೇರಣೆ ದೊರೆಯುವಂತಾದರೆ ಶಿಕ್ಷಕರ ಶ್ರಮ ಸಾರ್ಥಕ.



ನಲಿಕಲಿ ಉತ್ತಮ ಶಾಲೆಯಾಗಿ ಆಯ್ಕೆಯಾದ ಮೇಲೆ ಪ್ರಶಸ್ತಿ ಮೊತ್ತದಲ್ಲಿ ಅನೇಕ ಕಲಿಕೋಪಕರಣಗಳನ್ನು ತಯಾರಿಸಲಾಗಿದೆ. ಕಲಿಕಾ



ಚಪ್ಪರದಲ್ಲಿ ಮಕ್ಕಳ ಚಟುವಟಿಕೆಗಳಿಗೆ ಅವಕಾಶ ನೀಡಿದೆ.

## ಅಕ್ಷರದಾಸೋಹ ಕಾರ್ಯಕ್ರಮ :

ಬಿಸಿಯೂಟದ ತಯಾರಿಕೆಗಾಗಿ ಅಕ್ಷರದಾಸೋಹ ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಬಿಸಿಯೂಟವನ್ನು ಅಕ್ಷರದಾಸೋಹ ಕೊಠಡಿಯಲ್ಲಿ ತಯಾರಿಸಿ ಪೂರೈಸಲಾಗುತ್ತಿದೆ. ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಹಾಲನ್ನು ಹಾಗು ಸ್ವಚ್ಛವಾದ ಮತ್ತು ಆರೋಗ್ಯ ಪೂರ್ಣವಾದ ಆಹಾರದ ಸೇವನೆಯಿಂದ ನಮ್ಮ ಶಾಲೆಯ ಮಕ್ಕಳು ಚೈತನ್ಯಭರಿತರಾಗಿರುತ್ತಾರೆ. ಅಡುಗೆ ಕೊಠಡಿಯಲ್ಲಿ ಸಾಕಷ್ಟು ಉತ್ತಮವಾದ ಅಡುಗೆ ತಯಾರಿಕಾ ಸಾಮಾಗ್ರಿಗಳಿದ್ದು ಉತ್ತಮ ಸ್ಥಳಾವಕಾಶವನ್ನು ಹೊಂದಿದೆ. ಅಡುಗೆ ಮನೆಯಲ್ಲಿ ಸ್ವಚ್ಛತೆಗೆ ಪ್ರಥಮ ಆದ್ಯತೆಯನ್ನು ನೀಡಲಾಗಿದ್ದು ಅಡುಗೆ ಸಿಬ್ಬಂದಿ ಕಡ್ಡಾಯವಾಗಿ ಏಪ್ರಾನ್ ಧರಿಸುತ್ತಾರೆ.

## ವಾರದ ವಿಜ್ಞಾನ ಪ್ರಯೋಗ :-



ಪ್ರಯೋಗಗಳನ್ನು ಮಕ್ಕಳೇ ನಿರ್ವಹಿಸುತ್ತಿದ್ದಾರೆ. ಪ್ರತಿ ಬುಧವಾರ ಮಕ್ಕಳೇ ಪ್ರಯೋಗಗಳನ್ನು ದಾಖಲಿಸುತ್ತಿದ್ದಾರೆ

## ಪ್ರೇರಣಾ ಕ್ಲಬ್:-



ಕೆರೆ ಪರಿಸರ ವ್ಯವಸ್ಥೆ, ಅಂಚೆ ಕಚೇರಿ, ಪ್ರಾಚೀನ ದೇಗುಲ, ಬಸದಿ ಭೇಟಿ, ಮಣ್ಣಿನ ಮಾದರಿ, ಕಾಗದದ ಮಾದರಿ ತಯಾರಿ ಅನೇಕ ಕಲಿಕಾ ಚಟುವಟಿಕೆಗಳನ್ನು ಮಾಡಲಾಗಿದೆ.

## ರ್‍ಯಾಂಪ್ಸ್ :-

ಶಾಲೆಯಲ್ಲಿ ಉತ್ತಮವಾದ ರ್‍ಯಾಂಪ್ಸ್ ವ್ಯವಸ್ಥೆಯಿದ್ದು, ಸಿ.ಡಬ್ಲು.ಎಸ್.ಎನ್ ಮಕ್ಕಳು ಸುಲಭವಾಗಿ ವೀಲ್‌ಚೇರ್ ಮುಖಾಂತರ ಶಾಲೆಗೆ ಬರುವ ವ್ಯವಸ್ಥೆ ಮಾಡಲಾಗಿದೆ.

## ಶಾಲಾ ಕೈತೋಟ:–

**ಶಾಲೆ**ಯಲ್ಲಿ ಉತ್ತಮ ಮತ್ತು ಸುಂದರವಾದ ಕೈತೋಟವಿದೆ. ಈ ಕೈತೋಟಕ್ಕೆ ನೀರಿಗಾಗಿ ತುಂತುರು ನೀರಾವರಿ ವ್ಯವಸ್ಥೆಯನ್ನು ಮಾಡಲಾಗಿದೆ. ಕೈತೋಟದ ನಿರ್ವಹಣೆಯನ್ನು ಮಕ್ಕಳೇ ಮಾಡುತ್ತಾರೆ. ಕೈತೋಟದಲ್ಲಿ ನುಗ್ಗೆ ಗಿಡ, ಮಾವಿನ ಮರ, ಕಾಡುಸೀಬೆ, ಪೇರಳೆ ಮರ, ಚಿಕ್ಕು ಮರ, ತೆಂಗಿನ ಮರ, ಬಾಳೆಗಿಡ, ಕಾಳು ಮೆಣಸಿನಗಿಡ ಮುಂತಾದವುಗಳಿವೆ. ತೆಂಗಿನ ಕಾಯಿಯನ್ನು ಅಕ್ಷರದಾಸೋಹಕ್ಕೆ ಬಳಸಲಾಗುತ್ತದೆ. ದಾಸವಾಳ, ಮಲ್ಲಿಗೆ, ಗುಲಾಬಿ, ಶಂಖಪುಶ್ಪ, ಗೊರಟೆ ಅನೇಕ ಹೂವಿನ ಗಿಡಗಳಿವೆ.

## ಉತ್ತಮ ಶಾಲೆಯಾಗಿ ಮಾಡಲು ಕೈಗೊಂಡ ಮಾರ್ಗೋಪಾಯಗಳು:

1. ವಾರಕ್ಕೆ ಎರಡು ಬಾರಿ ತರಕಾರಿ ಪಲ್ಯ ,ಕಾಳು ನೀಡುವುದು
2. ಶಾಲೆಯ ಸಂಪೂರ್ಣ ಸ್ವಚ್ಚತೆಗೆ ಮೊದಲ ಆದ್ಯತೆ ನೀಡುವುದು.
3. ಮಕ್ಕಳ ಮನೆಗೆ ಗ್ರಂಥಾಲಯದ ಪುಸ್ತಕ ನೀಡಿರುವುದು.
4. ಹಾಜರಾತಿ ಹೆಚ್ಚಿಸಲು ಪ್ರೋತ್ಸಾಹದಾಯಕ ಬಹುಮಾನ ನೀಡುವುದು .
5. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು.
6. ಹತ್ತು ಅಂಶಗಳ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನ ನಡೆಸಿರುವುದು.
7. ಮಕ್ಕಳಿಂದಲೇ ಪ್ರಯೋಗ ನಡೆಸುತ್ತಿರುವುದು.
8. ಮನೆ ಭೇಟಿ ನಿರಂತರವಾಗಿ ನಡೆಸುತ್ತಿರುವುದು.
9. ದಾನಿಗಳ ಸಂಪರ್ಕದ ಮೂಲಕ ಶಾಲೆಯ ಪ್ರಗತಿ ಸಾಧಿಸುತ್ತಿರುವುದು.
10. ಕಲಿಕಾ ಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಿದ್ಧತೆ ಮೂಲಕವೇ ತರಗತಿ ಬೋಧನೆ ಮಾಡುತ್ತಿರುವುದು.

